ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 10-12-1978.

# *ವಿಸ್ತಾರವನ್ನು ನೋಡದೆ ಸಾರ ಅರ್ಥಾತ್ ಬಿಂದುವನ್ನು ನೋಡಿರಿ.*

(विस्तार को न देख सार अर्थात् बिन्दु को देखो)

**ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ  ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಮಧುಬನ ನಿವಾಸಿ ತ್ಯಾಗಿ, ತಪಸ್ವಿ ಮಕ್ಕಳೊಂದಿಗೆ ಬಾಪ್‌ದಾದಾ ಮಾತನಾಡುತ್ತಿದ್ದಾರೆ.**

ಮಧುಬನ ನಿವಾಸಿಗಳು ಎಂದರೆ ಮಧುರತೆಯ ಸಾಗರದಲ್ಲಿ ಸದಾ ತೇಲಾಡುವವರು - ಬಾಪ್‌ದಾದಾರವರ ವಿಶೇಷ ಕರ್ಮಭೂಮಿ, ಚರಿತ್ರೆಯಭೂಮಿ, ಮಧುರ ಮಿಲನದ ಭೂಮಿ ಅಥವಾ ಮಹಾ ಪುಣ್ಯಭೂಮಿ ಅಗಿರುವ ಮಧುಬನದ ಸದಾ ನಿವಾಸಿಗಳು ಎಷ್ಟು ಶ್ರೇಷ್ಠ ಆತ್ಮರಾಗಿದ್ದೀರಿ, ನಿರಾಕಾರ ತಂದೆಗೂ ಸಹ ಈ ಸಾಕಾರ ಭೂಮಿಯೊಂದಿಗೆ ವಿಶೇಷ ಸ್ನೇಹ ಇದೆ. ಇಂತಹ ಭೂಮಿಯ ನಿವಾಸಿಗಳು ನೀವು ಸ್ವಯಂ ನಾವು ಅಂತಹವರಾಗಿದ್ದೇವೆ ಎನ್ನುವ ಅನುಭವವನ್ನು ಸದಾ ಮಾಡುತ್ತಿರುತ್ತೀರಾ, ಮಧುಬನ ಎಂದರೆ ಮಧುರ ಭೂಮಿ. ವೃತ್ತಿಯಲ್ಲಿಯೂ ಮಧುರತೆ, ನುಡಿಯಲ್ಲಿಯೂ ಮಧುರತೆ ಹಾಗೂ ಪ್ರತಿಯೊಂದು ಕರ್ಮದಲ್ಲಿಯೂ ಸದಾ ಮಧುರತೆ ಇರುತ್ತದೆಯಲ್ಲವೇ. ಎಂತಹ ಭೂಮಿಯೋ ಅಂತಹ ಭೂಮಿಯಲ್ಲಿರುವವರೂ ಶ್ರೇಷ್ಠ ಆತ್ಮರೇ. ಮಧುಬನದಿಂದ ಅನುಭವ ಮಾಡಿಕೊಂಡು ಹೋಗುವ ಆತ್ಮರೂ ಏನು ಹೇಳುತ್ತಾರೆ. “ಮಧುಬನವು ಸಂಗಮಯುಗದ ಸ್ವರ್ಗ ಆಗಿದೆ. ಆದ್ದರಿಂದ ಮಧುಬನ ನಿವಾಸಿಗಳು ಸ್ವರ್ಗಭೂಮಿಯಲ್ಲಿ ಇರುವವರು” ಎಂದು ಹೇಳುತ್ತಾರಲ್ಲವೇ. ಈಗಲೂ ಸ್ವರ್ಗದಲ್ಲಿರುವವರು ಹಾಗೂ ಭವಿಷ್ಯದಲ್ಲಿಯೂ ಸ್ವರ್ಗದಲ್ಲಿರುವವರು ಆಗಿದ್ದೀರಿ ಹೀಗೆ ಡಬಲ್ ಸ್ವರ್ಗಕ್ಕೆ ಅಧಿಕಾರಿ ಆಗಿರುವವರು ಎಷ್ಟು ವಿಶೇಷ ಆತ್ಮರಾಗಿದ್ದೀರಿ. ಬಾಪ್ ದಾದಾ ಇಂದು ವಿಶೇಷವಾಗಿ ಮಧುಬನ ನಿವಾಸಿಗಳೊಂದಿಗೆ ಮಿಲನ ಮಾಡಲು ಬಂದಿದ್ದೇವೆ. ಸ್ವರ್ಗದ ವಿಶೇಷತೆ ಅಥವಾ ಸ್ವರ್ಗದ ವಿಶೇಷ ಸ್ತುತಿ(ಮಹಿಮೆ)ಯು ಏನಾಗಿದೆ? “ಸದಾ ಸಂಪನ್ನ ಎಂದರೆ ಸ್ವರ್ಗದ ಭಂಡಾರದಲ್ಲಿ ಪ್ರಾಪ್ತಿಯಾಗದ ವಸ್ತುವೇ ಇಲ್ಲ - ಎನ್ನುವುದೇ ಸ್ವರ್ಗದ ವಿಶೇಷ ಗಾಯನವಾಗಿದೆ. ಸಂಗಮಯುಗದ ಸ್ವರ್ಗವೇ ಆಗಲಿ ಅಥವಾ ಭವಿಷ್ಯದ ಸ್ವರ್ಗವೇ ಆಗಲಿ – ಎರಡರ ವಿಶೇಷತೆಯೂ ಇದೊಂದೇ ಗಾಯನ ಮಾಡಲಟ್ಟಿದೆ. ಆದರೆ "ಮಧುಬನ ನಿವಾಸಿ" ಎಂದರೆ ಸಂಗಮಯುಗದ ಸ್ವರ್ಗದ ನಿವಾಸಿ ಆಗಿದ್ದೀರಿ - ಸಂಪನ್ನ

ಸ್ಥಿತಿಯ ಅನುಭವವನ್ನು ಮಾಡುತ್ತಿದ್ದೀರಾ? ಆ ಸಂಪನ್ನ ಸ್ಥಿತಿಯಲ್ಲಿ ನಾವು ಸದಾ ಕೃಷ್ಣ ಆತ್ಮರಾಗಿದ್ದೇವೆ ಎನ್ನುವ ಅನುಭವ ಆಗುತ್ತದೆಯೇ. ಹೇಗೆ "ಇಚ್ಛಾ ಮಾತ್ರ ಅವಿದ್ಯಾ" ದ ಸಂಸ್ಕಾರವು ಭವಿಷ್ಯದ ಸ್ವರ್ಗದಲ್ಲಿ ಸ್ವಾಭಾವಿಕವಾಗಿರುವುದೋ ಹಾಗೆಯೇ ಮಧುಬನ ನಿವಾಸಿಗಳದು ಈ ಸ್ವಾಭಾವಿಕ ಸಂಸ್ಕಾರ ಆಗಿದೆಯೇ? ಸ್ವರ್ಗವಾಸಿ ಎಂದರೆ ಇದೆಲ್ಲದರಲ್ಲಿಯೂ ಸ್ವಾಭಾವಿಕ ಸಂಸ್ಕಾರ ಸ್ವರೂಪ ಆಗಿದ್ದೀರಾ? ನೀವು ಎಲ್ಲಿಯ ನಿವಾಸಿಗಳು ಎಂದು ಯಾರಾದರೂ ಕೇಳಿದರೆ ನಾವು ಮಧುಬನ ನಿವಾಸಿಗಳಾಗಿದ್ದೇವೆ ಎಂದು ತುಂಬಾ ಅಭಿಮಾನ, ಸಂತೋಷದಿಂದ ಹೇಳುತ್ತೀರಲ್ಲವೇ, ಮಧುಬನ ನಿವಾಸಿಯ ಮುದ್ರೆ ನಿಮಗೆ ಬಿದ್ದಿದೆ - ಜೊತೆ ಜೊತೆಗೆ ಎಂತಹ ಸ್ಥಾನವೋ ಅಂತಹ ಸ್ಥಿತಿಯ ಮುದ್ರೆಯೂ ಇರುವುದಲ್ಲವೇ, ಹೇಗೆ ಶೀತಲ ಸಂಗ್ರಹಾಗಾರಕ್ಕೆ ಹೋದರೆ ಎಂತಹ ಸ್ಥಾನವೋ ಅಂತಹ ಸ್ಥಿತಿಯು ತಾನಾಗಿಯೇ ಇರುವುದಲ್ಲವೇ, ಹಾಗೆಯೇ ಮಧುಬನದ ಮಹಿಮೆಯು ಏನಿದೆಯೋ ಅಂತಹ ಸಂಸ್ಕಾರವು ನಿಮ್ಮಲ್ಲಿ ರೂಪುಗೊಂಡಿದೆಯೇ? ಏಕೆಂದರೆ ಸಾಕಾರ ರೂಪದಲ್ಲಿ ಸ್ವರೂಪದ ಲಕ್ಷ್ಯವು ಎಲ್ಲರ ಮುಂದೆ ಮಧುಬನ ಇದೆ - ಎಲ್ಲರೂ ಮಧುಬನವನ್ನು ಅನುಸರಿಸುತ್ತಾರೆ. ಯಾರ ಸ್ಥಿತಿಯಲ್ಲಿಯಾದರೂ ಏರುಪೇರಾದರೆ ಅಚಲಘರವಾದ ಮಧುಬನವು ನೆನಪಾಗುತ್ತದೆ. ಅಚಲಗೃಹ ಆದ ಮಧುಬನಕ್ಕೆ ಹೋದರೆ ಅಚಲ ಆಗಿಬಿಡುವೆವು ಎನ್ನುವ ಭಾವನೆಯಿಂದ, ಶುಭ ಇಚ್ಛೆಯಿಂದ ಈ ಪುಣ್ಯಭೂಮಿಯಲ್ಲಿ ಎಲ್ಲರೂ ಬರುತ್ತಾರೆ. ಅನೇಕ ಆತ್ಮರ ಏರುಪೇರನ್ನು ಸರಿಪಡಿಸುವ ಸಾಧನವು ದೊರೆಯುವ ಸ್ಥಾನವು ಅಚಲಗೃಹ ಆದ ಮಧುಬನವಾಗಿದೆ. ಆದ್ದರಿಂದ ಮಧುಬನದಲ್ಲಿ ಇರುವವರೂ ಸಹ ಸದಾ ಅಚಲ ಆಗಿರುವರಲ್ಲವೇ. ಇಂತಹ ಸ್ಥಿತಿಯು ಅನೇಕ ಆತ್ಮರಿಗೆ ಮಾರ್ಗದರ್ಶನ ಮಾಡುವುದಾಗುವುದು. ಏಕೆಂದರೆ ಮಧುಬನವು ಬೆಳಕಿನಗೃಹ (ಲೈಟ್‌ಹೌಸ್) ಆಗಿದೆ. ಸರ್ವ ಸೇವಾಕೇಂದ್ರಗಳಿಗೆ ಸಹಯೋಗವನ್ನು ನೀಡುವವರು ಮಧುಬನದ ನಿವಾಸಿಗಳಾಗಿದ್ದೀರಿ. ಸದಾ ಸಂಕಲ್ಪ, ವಾಣಿ ಅಥವಾ ಕರ್ಮದಿಂದ ಒಬ್ಬರಿಗೊಬ್ಬರು ಸಹಯೋಗಿ ಆಗಿರುವುದರಿಂದ ಸಂಗಡಿಗರಿಗೂ ಸಹ ಸಹಯೋಗಿ ಆಗುವಿರಲ್ಲವೇ. ಉತ್ತಮ ಫಲಿತಾಂಶವನ್ನು ತೋರಿಸಲು ಎಲ್ಲಾ ಮಕ್ಕಳಿಗೂ ಒಂದು ವರ್ಷದ ಅವಧಿಯು ದೊರೆತಿದೆ. ಆದ್ದರಿಂದ ಒಂದು ವರ್ಷದಲ್ಲಿ ಅವಸ್ಥೆಯನ್ನು ಪರಿವರ್ತನೆ ಮಾಡಿಕೊಳ್ಳುತ್ತೀರಾ? ಇದನ್ನು ಕೇಳುವ ಇತರರು, ತಾವೂ ಸಹ ಪರಿವರ್ತನೆ ಆಗಿಬಿಡಬೇಕು. ಒಬ್ಬೊಬ್ಬ ಆತ್ಮರು ತಮ್ಮ ಸತ್ಯವಾದ ಹೃದಯದಿಂದ ಉತ್ಸಾಹದಿಂದ ತಂದೆಯ ಸ್ನೇಹದಿಂದ ಅನುಭವವನ್ನು ಹೇಳುತ್ತೀರಿ. ಈ ಅನುಭವವನ್ನು ಕೇಳುತ್ತಾ ಕೇಳುತ್ತಲೇ ಅನೇಕ ಆತ್ಮರು ಪರಿವರ್ತನೆ ಆಗಿಬಿಡುತ್ತಾರೆ. ಒಬ್ಬರ ಪರಿವರ್ತನೆಯು ಅನೇಕ ಆತ್ಮರ ಪರಿವರ್ತನೆಯ ಸಾಧನ ಆಗಿಬಿಡುತ್ತದೆ. ಹೀಗೆ ಅನೇಕರಿಗೆ ಒಂದು ಆದರ್ಶದ ರೂಪದಲ್ಲಿ ಇರುವಂತಹ ಪರಿವರ್ತನೆಯು ನಿಮ್ಮಲ್ಲಿ ಆಗಿದೆಯೇ. ಒಂದು ವರ್ಷದಲ್ಲಿ ಇಂತಹ ಯಾವುದಾದರೂ ಅದ್ಭುತವಾದ ಅನುಭವವು ಆಗಿದೆಯೇ, ಯಾರು ಯಾರು ಹೈಜಂಪ್ ಮಾಡಿದಿರಿ, ಯಾರು ಲಿಫ್ಟ್ ನ ಕೊಡುಗೆಯನ್ನು ತೆಗೆದುಕೊಂಡಿದ್ದೀರಿ?

**ಹೇಗೆ ಈಗಿನ ಕಾಲದಲ್ಲಿ ಟೆಲಿವಿಷನ್ನಲ್ಲಿ ನಾಲ್ಕೂ ಕಡೆ ಒಂದೇ ಸ್ಥಾನದ ಚಿತ್ರವು ಸ್ಪಷ್ಟವಾಗಿ ಕಂಡು ಬರುತ್ತದೆಯೋ ಹಾಗೆಯೇ ಮಧುಬನವೂ ಸಹ ಟೆಲಿವಿಷನ್ ಕೇಂದ್ರ ಆಗಿದೆ. ನಾಲ್ಕೂ ಕಡೆ ಟೆಲಿವಿಷನ್ ನ ಸಲಕರಣೆಗಳೂ ಸಜ್ಜುಗೊಳಿಸಲ್ಪಟ್ಟಿವೆ. ಮತ್ತೆ ಟೆಲಿವಿಷನ್ ಕೇಂದ್ರದಲ್ಲಿ ಏನು ಪಾತ್ರಾಭಿನಯವು ನಡೆಯುತ್ತದೆಯೋ ಅದು ತಾನಾಗಿಯೇ ಎಲ್ಲಾ ಕಡೆ ಕಂಡು ಬರುತ್ತದೆ. ಆದ್ದರಿಂದ ಮಧುಬನದವರ ಪ್ರತಿಯೊಂದು ಸಂಕಲ್ಪವೂ ಸಹ ನಾಲ್ಕೂ ಕಡೆ ಕಂಡುಬರುತ್ತದೆ ಎಂದರೆ ಹರಡುತ್ತದೆ.** ಏಕೆಂದರೆ ಟೆಲಿವಿಷನ್ ಉಪಕರಣವು ನಾಲ್ಕೂ ಕಡೆ ವ್ಯವಸ್ಥೆಗೊಳಿಸಲ್ಪಟ್ಟಿದೆ. ಹೇಗೆ ಈಗಿನ ಕಾಲದಲ್ಲಿ ವಿಜ್ಞಾನದ ಸಾಧನಗಳ ಮೂಲಕ ಸಂಕಲ್ಪಗಳ ಗತಿ ಅಥವಾ ಮನಸ್ಸಿನ ಸ್ಥಿತಿಯನ್ನು ಪರಿಶೀಲನೆ ಮಾಡಬಹುದೋ ಹಾಗೆಯೇ ಮಧುಬನ ನಿವಾಸಿಗಳ ಸಂಕಲ್ಪಗಳ ಗತಿ ಅಥವಾ ಮಾನಸಿಕ ಸ್ಥಿತಿಯೂ ಸಹ ನಾಲ್ಕೂ ಕಡೆ ಹರಡುತ್ತದೆ. ಆದ್ದರಿಂದ ಪ್ರತಿಯೊಂದು ಸಂಕಲ್ಪದಮೇಲೆಯೂ ಗಮನ ಇರಲಿ. ಇದರಲ್ಲಿ ಅಜಾಗರೂಕತೆ ಇರಬಾರದು. ಮಧುಬನ ನಿವಾಸಿಗಳು ಮಧುಬನದಲ್ಲಿ ಕುಳಿತಿದ್ದರೂ ಸಹ ಯಾವುದೇ ಪ್ರಕಾರದ ವಿಶೇಷ ಸಂಕಲ್ಪದ ಮೂಲಕ ತರಂಗ(ವೈಬ್ರೇಷನ್ಸ್) ಗಳನ್ನು ಪ್ರಸಾರಮಾಡಲು ಬಯಸಿದರೆ ಈ ಒಂದು ಸ್ಥಾನದಲ್ಲಿ ಕುಳಿತುಕೊಂಡಿದ್ದರೂ ಸಹ ನಾಲ್ಕೂ ಕಡೆ ಪ್ರಸಾರ ಮಾಡಬಹುದು. ಹೇಗೆ ಸ್ಥೂಲ ವಸ್ತುವಿನ ಪರಿಮಳವು ನಾಲ್ಕೂ ಕಡೆ ತಾನಾಗಿಯೇ ಹರಡುತ್ತದೆಯೋ ಹಾಗೆಯೇ ಈ ಕಂಪನ, ಸಂಕಲ್ಪದ ಮೂಲಕ ನಾಲ್ಕೂ ಕಡೆ ತಾನಾಗಿಯೇ ಹರಡಿಬಿಡಬೇಕು. ಇದು ಮಧುಬನ ನಿವಾಸಿಗಳ ವಿಶೇಷ ಸೇವೆ ಆಗಿದೆ.

ಹೇಗೆ ಮಧುಬನದಲ್ಲಿ ವಿಶೇಷ ಭಿಟ್ಟಿಯನ್ನು ಮಾಡುತ್ತೀರಿ, ಆಗ ಅದರ ಕಂಪನಗಳು ನಾಲ್ಕೂ ಕಡೆ ತಲುಪುತ್ತವೆ ಅಲ್ಲವೇ. ಪತ್ರಗಳ ಮೂಲಕ ಸಮಾಚಾರವು ತಲುಪದಿದ್ದರೂ ಸಹ ಮಧುಬನದ ಸೂಕ್ಷ್ಮ ಕಂಪನಗಳು ಬಹಳ ಸಹಜವಾಗಿಯೇ ನಾಲ್ಕೂ ಕಡೆ ಪ್ರಸಾರವಾಗಬಲ್ಲವು. ನೀವು ಇಂತಹ ಸೇವೆಯನ್ನು ಮಾಡುತ್ತೀರೋ ಅಥವಾ ಕೇವಲ ಯಜ್ಞದ ಪಾಲನೆಯ ಸೇವೆಯನ್ನು ಮಾಡುತ್ತೀರೋ? ಕರ್ಮದ ಮೂಲಕ ಕರ್ಮಣಾ ಸೇವೆಯನ್ನು ಮಾಡುವ ಕಾರ್ಯಭಾರ ಇದೆ. ಆದರೆ ಜೊತೆ ಜೊತೆಗೆ ಮಾನಸಿಕ ಸೇವೆಯ ಜವಾಬ್ದಾರಿಯೂ ಸಹ ಇದೆ. ಬಾಪ್‌ದಾದಾರವರಂತು ವರ್ಷದ ಫಲಿತಾಂಶವನ್ನು ನೋಡಲು ಬಂದಿದ್ದಾರೆ ಅಲ್ಲವೇ. ಯಾರು ಸದಾ ಹತ್ತಿರದಲ್ಲಿಯೇ ಇರುತ್ತೀರೋ, ಸಾಕಾರದಲ್ಲಿಯೂ ಸಮೀಪ ಇದ್ದೀರೋ ಹಾಗೂ ಸ್ಥಾನವೂ ಸಹ ಶ್ರೇಷ್ಠ, ಪ್ರಾಪ್ತಿಯೂ ಸಹ ಶ್ರೇಷ್ಠ ಆಗಿದೆಯೋ ಅಂತಹ ಆತ್ಮರ ಪ್ರಾರಬ್ಧವು ಏನು ರೂಪುಗೊಳ್ಳುತ್ತದೆ? ಶಾಸ್ತ್ರಗಳಲ್ಲಿಯೂ ಸಹ ಮಧುಬನದ ಭೂಮಿಯು ಸದಾ ಸ್ತುತಿಸಲ್ಪಟ್ಟಿದೆ. ಆದ್ದರಿಂದ ಮಧುಬನ ನಿವಾಸಿಗಳು ಪ್ರತಿಯೊಂದು ವಿಷಯದಲ್ಲಿ ವಿಶೇಷ ಆತ್ಮರು, ಪ್ರತಿಯೊಂದು ಸಮಯದಲ್ಲಿ ಯಾವುದಾದರೂ ವಿಶೇಷತೆಯನ್ನು ತೋರಿಸುವವರು ಆಗಿದ್ದೀರಿ. ಯಾವುದೇ ತಂಡವು ಬಂದರೂ ಮಧುಬನ ನಿವಾಸಿಗಳಲ್ಲಿ ಈ ವಿಶೇಷತೆ ಇತ್ತು ಎನ್ನುವ ಅನುಭವವನ್ನು ಮಾಡಬೇಕು. ಮಧುಬನ ಸ್ವರ್ಗದಲ್ಲಿ ಪ್ರತಿಯೊಂದು ಆತ್ಮವೂ ಸದಾ ತೃಪ್ತ ಆತ್ಮ, ಸಂಪನ್ನಮೂರ್ತಿ ಆಗಿತ್ತು ಎನ್ನುವ ಅನುಭವ ಮಾಡಬೇಕು.

ಇದರ ಆಧಾರವು ಏನೆಂದರೆ ನಾವು ದಾತಾನ ಮಕ್ಕಳಾಗಿ ಸರ್ವ ಆತ್ಮರಿಗೂ ಕೊಡಬೇಕೇ ಹೊರತು ತೆಗೆದುಕೊಳ್ಳಬಾರದು ಎನ್ನುವ ಒಂದೇ ಲಕ್ಷ್ಯವು ಸದಾ ಇರಬೇಕು. ಇವರು ಮಾಡಿದರೆ ನಾನು ಮಾಡುವೆನು ಎನ್ನುವುದು ಸರಿಯಲ್ಲ. ಪ್ರತಿಯೊಬ್ಬರೂ ದಾತತನದ ಭಾವನೆಯನ್ನು ಇಟ್ಟುಕೊಂಡರೆ ಆಗ ಎಲ್ಲರೂ ಕೊಡುವವರು ಎಂದರೆ ಸಂಪನ್ನ ಆತ್ಮ ಆಗಿಬಿಡುವಿರಿ. ಸಂಪನ್ನ ಆಗದಿದ್ದರೆ ಕೊಡುವುದು ಸಾಧ್ಯವಾಗುವುದಿಲ್ಲ. ಯಾರು ಸಂಪನ್ನ ಆತ್ಮ ಆಗಿರುವರೋ ಅವರು ಸದಾ ತೃಪ್ತ ಆತ್ಮ ಆಗಿಯೇ ಇರುವರು. ನಾನು ಕೊಡುವ ದಾತಾನ ಮಗು ಆಗಿದ್ದೇನೆ ಎಂದು ಬುದ್ಧಿಯಲ್ಲಿಡಿ. ಕೊಡುವುದೇ ತೆಗೆದುಕೊಳ್ಳುವುದಾಗಿದೆ. ಎಷ್ಟು ಕೊಡುವಿರೋ ಅಷ್ಟು ತೆಗೆದುಕೊಳ್ಳುವಿರಿ. ಪ್ರತ್ಯಕ್ಷದಲ್ಲಿ ತೆಗೆದುಕೊಳ್ಳುವವರಲ್ಲ ಕೊಡುವವರಾಗಬೇಕು. ದಾತತನದ ಭಾವನೆಯು ಸದಾ ನಿರ್ವಿಘ್ನವಾದ ಇಚ್ಛಾ ಮಾತ್ರಂ ಅವಿದ್ಯೆಯ ಅನುಭವವನ್ನು ಮೂಡಿಸುತ್ತದೆ. ಸದಾ ಒಂದು ಲಕ್ಷ್ಯವು ಬಿಂದು ಆಗಿದೆ. ಒಂದು ಲಕ್ಷ್ಯ ಎಂದರೆ ಬಿಂದುವಿನ ಕಡೆಗೆ ಸದಾ ನೋಡುತ್ತಿರುವವರು, ಬೇರೆ ಯಾವುದನ್ನಾದರೂ ನೋಡುತ್ತಿದ್ದರೂ ಸಹ ನೋಡಬಾರದು. ದೃಷ್ಟಿಯು ಒಂದು ಬಿಂದುವಿನ ಕಡೆಗೇ ಇರಬೇಕು. ಹೇಗೆ ಜ್ಞಾಪಕಾರ್ಥ ರೂಪದಲ್ಲಿಯೂ ಸಹ ಅರ್ಜುನನ ದೃಷ್ಟಿಯು ಮೀನಿನ ಕಡೆಗೆ ಇರಲಿಲ್ಲ ಅದರ ಕಣ್ಣಿನಲ್ಲಿಯೂ ಬಿಂದುವಿನಲ್ಲಿ ಕೇಂದ್ರೀಕೃತ ಆಗಿತ್ತು ಎನ್ನುವ ವರ್ಣನೆ ಇದೆ. ಇಲ್ಲಿ ಮೀನು ಎಂದರೆ ವಿಸ್ತಾರ ಹಾಗೂ ಬಿಂದುವು ಸಾರವಾಗಿದೆ. ಅರ್ಜುನನು ವಿಸ್ತಾರವನ್ನು ನೋಡಲಿಲ್ಲ, ಸಾರ ಅಥವಾ ಬಿಂದುವನ್ನು ನೋಡಿದನು. ಅದೇ ಪ್ರಕಾರವಾಗಿ ಒಂದು ವೇಳೆ ಯಾವುದರಲ್ಲಿಯಾದರೂ ವಿಸ್ತಾರವನ್ನು ನೋಡಿದರೆ ವಿಘ್ನದಲ್ಲಿ ಸಿಕ್ಕಿಬೀಳುತ್ತೀರಿ. ಆದರೆ ಸಾರ ಎಂದರೆ ಒಂದು ಬಿಂದುವನ್ನು ನೋಡುತ್ತಿದ್ದರೆ ಬಿಂದುರೂಪ ಸ್ಥಿತಿಯು ಆಗಿಬಿಡುತ್ತದೆ ಹಾಗೂ ಪೂರ್ಣ ವಿರಾಮ ಎಂದರೆ ಬಿಂದು. ಕರ್ಮದಲ್ಲಿಯೂ ಸಹ ಪೂರ್ಣ ವಿರಾಮ ಎಂದರೆ ಬಿಂದು, ಸ್ಮೃತಿಯಲ್ಲಿಯೂ ಸಹ ಬಿಂದು ಎಂದರೆ ಬೀಜರೂಪ ಸ್ಥಿತಿ ಆಗಿಬಿಡುತ್ತದೆ. ಈ ವಿಶೇಷ ಅಭ್ಯಾಸವನ್ನು ಮಾಡಬೇಕು. ವಿಸ್ತಾರವನ್ನು ನೋಡುತ್ತಿದ್ದರೂ ಸಹ ನೋಡಬಾರದು. ಕೇಳುತ್ತಿದ್ದರೂ ಸಹ ಕೇಳಬಾರದು. ಈ ಅಭ್ಯಾಸವು ಈಗಿನಿಂದ ಇರಬೇಕು. ಏಕೆಂದರೆ ಅಂತ್ಯ ಸಮಯದಲ್ಲಿ ನಾಲ್ಕೂ ಕಡೆಯ ಅಲ್ಲೋಲ್ಲ ಕಲ್ಲೋಲದ ಪ್ರತಿಧ್ವನಿಯು ತುಂಬಾ ದುಃಖಧಾಯಕ ಆಗಿರುವುದು, ದೃಶ್ಯವೂ ಸಹ ಅತಿ ಭಯಾನಕ ಆಗಿರುವುದು. ಈಗಿನ ಘಟನೆಗಳನ್ನು ಅದಕ್ಕೆ ಹೋಲಿಸಿದರೆ ಏನೂ ಇಲ್ಲವೆಂದೇ ತಿಳಿಯಬೇಕು. ಒಂದುವೇಳೆ ಈಗಿನಿಂದಲೇ ನೋಡುತ್ತಿದ್ದರೂ ನೋಡದಿರುವುದು, ಕೇಳುತ್ತಿದ್ದರೂ ಕೇಳದಿರುವುದು ಈ ಅಭ್ಯಾಸ ಇಲ್ಲದಿದ್ದರೆ ಅಂತ್ಯದಲ್ಲಿ ಈ ವಿಕರಾಳ ದೃಶ್ಯವನ್ನು ನೋಡುತ್ತಾ ಒಂದು ಘಳಿಗೆಯ ಪರೀಕ್ಷೆಯಲ್ಲಿ ಸದಾಕಾಲದವರೆಗೆ ನಾಪಾಸನ ಅಂಕಗಳು ದೊರೆತುಬಿಡುವವು. ಆದ್ದರಿಂದ ಈ ವಿಶೇಷ ಅಭ್ಯಾಸವೂ ಇರಬೇಕು. ಎಂತಹ ಸ್ಥಿತಿಯು ಇರಬೇಕೆಂದರೆ ಅದರಲ್ಲಿ ಸಾಕಾರ ಶರೀರವೂ ಸಹ ಆಕಾರಿ ಸೂಕ್ಷ್ಮದೇವತೆಯ ರೂಪ ಎನ್ನುವ ಅನುಭವ ಮಾಡಿದ್ದನ್ನು ನೋಡಿದಿರಿ. ನಡೆದಾಡುತ್ತಾ ತಿರುಗಾಡುತ್ತಾ

ಆಕಾರಿ ಸೂಕ್ಷ್ಮದೇವತೆಯ ಅನುಭವವನ್ನು ಮಾಡುತ್ತಿದ್ದರು, ಶರೀರವಂತು ಅದೇ ಆಗಿತ್ತಲ್ಲವೇ. ಆದರೆ ಸ್ಥೂಲ ಶರೀರದ ಪರಿವೆಯು ತೊಲಗಿ ಹೋಗಿದ್ದರಿಂದ ಸ್ಥೂಲ ಇದ್ದರೂ ಸಹ ಅಕಾರೀ ರೂಪದ ಅನುಭವವನ್ನು ಮಾಡುತ್ತಿದ್ದರೂ, ಇಂತಹ ಅಭ್ಯಾಸವು ನಿಮ್ಮೆಲ್ಲರದೂ ಆಗಬೇಕು. ಕರ್ಮೇಂದ್ರಿಯಗಳ ಮೂಲಕ ಕರ್ಮವು ನಡೆಯುತ್ತಾ ಇರಬೇಕು. ಆದರೆ ಮಾನಸಿಕ ಶಕ್ತಿಯ ಮೂಲಕ ವಾಯುಮಂಡಲವು ಶಕ್ತಿಶಾಲಿ, ಸ್ನೇಹಸಂಪನ್ನ, ಸರ್ವರ ಸಹಯೋಗದ ಕಂಪನದ ಪ್ರಸಾರ ಆಗಬೇಕು. ಯಾವುದೇ ಸ್ಥಾನದಲ್ಲಿ ಹೋದರೂ ಈ ಸೂಕ್ಷ್ಮ ದೇವತಾ ರೂಪವು ಕಂಡುಬರಬೇಕು. ಕರ್ಮವನ್ನು ಮಾಡುತ್ತಿರಬೇಕು, ಆದರೆ ಒಂದೇ ಸಮಯದಲ್ಲಿ ಕರ್ಮ ಹಾಗೂ ಮಾನಸಿಕ ಎರಡೂ ಸೇವೆಗಳ ಸಮತೋಲನ ಇರಬೇಕು. ಹೇಗೆ ಮೊಟ್ಟಮೊದಲು ಈ ಅಭ್ಯಾಸವನ್ನು ಮಾಡಿಸಲಾಯಿತು. ಕರ್ಮವು ತುಂಬಾ ಸಾಧಾರಣವಾದುದೇ ಆಗಿರಬಹುದು, ಆದರೆ ಸ್ಥಿತಿಯು ಎಷ್ಟು ಶ್ರೇಷ್ಠ ಆಗಿರಬೇಕೆಂದರೆ ಸಾಧಾರಣ ಕರ್ಮ ಆಗಿದ್ದರೂ ಸಹ ಸಾಕ್ಷಾತ್ಕಾರ ಮೂರ್ತಿ ಆಗಿ ಕಂಡುಬರಬೇಕು. ಯಾವುದೇ ಸ್ಥೂಲ ಕಾರ್ಯ, ಬಟ್ಟೆ ಒಗೆಯುವುದು ಅಥವಾ ಕಸಗೂಡಿಸುವುದು ಮೊದಲಾದುದನ್ನು ಮಾಡುತ್ತಿದ್ದರೂ ಅಡುಗೆ ಮನೆಯ ಕಾರ್ಯವನ್ನು ಮಾಡುತ್ತಿದ್ದರೂ, ನೋಡುತ್ತಿರುವವರು ದೇವತಾ ರೂಪ ಆಗಿದ್ದಾರೆ, ಆದರೆ ಎಂತಹ ಸಾಧಾರಣ ಕಾರ್ಯವನ್ನು ಮಾಡುತ್ತಿದ್ದಾರೆ ಎನ್ನುವ ವರ್ಣನೆಯನ್ನು  ಮಾಡುವ ಸಮಯವು ಪ್ರತ್ಯಕ್ಷದಲ್ಲಿ ಬರುವುದು. ಕಾರ್ಯವು ಸಾಧಾರಣ ಆಗಿದ್ದರೂ ಸ್ಥಿತಿಯು ಅತಿಶ್ರೇಷ್ಠ ಆಗಿರುವುದು. ಹೇಗೆ ಸತ್ಯಯುಗದ ರಾಜಕುಮಾರ ರಾಜಕುಮಾರಿಯರ ಆತ್ಮರು ಬರುತ್ತಿದ್ದಾಗ ಆ ಭವಿಷ್ಯದ ರೂಪವನ್ನು ಧ್ಯಾನದಲ್ಲಿ ನೋಡುತ್ತಾ ಇವರು ಇಷ್ಟು ದೊಡ್ಡ ಮಹಾರಾಜ ಅಗುವವರು ಈಗ ಎಂತಹ ಸಾಧಾರಣ ಕರ್ಮವನ್ನು ಮಾಡುತ್ತಾ ಇದ್ದಾರೆ ಎಂದು ಆಶ್ಚರ್ಯವಾಗುತ್ತದೆ. ಹಾಗೆಯೇ ನಮ್ಮ ಇಷ್ಟೊಂದು ಶ್ರೇಷ್ಠ ಪೂಜ್ಯ ಇಷ್ಟದೇವತೆಯು ಈ ಸಾಧಾರಣಕಾರ್ಯವನ್ನು ಮಾಡುತ್ತಾ ಇದ್ದಾರೆ ಎಂದು ಮುಂದೆ ಬರಲಿರುವ ಆತ್ಮರು ಸ್ತುತಿಸುವರು. ನಡೆದಾಡುತ್ತಾ ಚಲಿಸುತ್ತಾ ಇಷ್ಟದೇವ ಅಥವಾ ಇಷ್ಟದೇವಿಯ ಸಾಕ್ಷಾತ್ಕಾರವು ಸ್ಪಷ್ಟವಾಗಿ ಕಂಡುಬರುವುದು. ನಿಮ್ಮ ಪೂಜ್ಯ ಸ್ವರೂಪವನ್ನು ಪ್ರತ್ಯಕ್ಷವಾಗಿ ನೋಡಲು ತೊಡಗುವಿರಿ, ನಿಮ್ಮ ಸೂಕ್ಷ್ಮ ದೇವತಾ ರೂಪವು ಪ್ರತ್ಯಕ್ಷವಾಗಿ ಕಾಣಲು ಪ್ರಾರಂಭವಾಗುವುದು. ಹೇಗೆ ಕಲ್ಪದ ಹಿಂದಿನ ವರ್ಣನೆಯೂ ಅರ್ಜುನನ ಬಗ್ಗೆ ಇದೆ. ಅವನು ಕೃಷ್ಣನನ್ನು ಸಾಧಾರಣ ಸಖನ ರೂಪದಲ್ಲಿಯೂ ನೋಡುತ್ತಿದ್ದನು. ಆದರೆ ವಾಸ್ತವಿಕ ಸ್ವರೂಪದ ಸಾಕ್ಷಾತ್ಕಾರ ಮಾಡಿದ ನಂತರ "ನೀನು ಯಾರು ಎನ್ನುವುದು ಗೊತ್ತಾಯಿತು. ಇಷ್ಟು ಮಹಿಮಾವಂತನಾಗಿದ್ದರೂ ಈ ಸಾಧಾರಣ ಸ್ನೇಹಿತನ ರೂಪದಲ್ಲಿರುವೆ" ಎಂದು ಸ್ತುತಿ ಮಾಡಿದನಂತೆ. ಇದೇ ರೀತಿಯಲ್ಲಿ ಚಲಿಸುತ್ತಾ, ನಡೆದಾಡುತ್ತಾ ನಿಮ್ಮದೂ ಸಾಕ್ಷಾತ್ಕಾರ ಆಗುವುದು. ದಿವ್ಯದೃಷ್ಟಿಯ ಮೂಲಕ ನೋಡುವುದೇ ಬೇರೆ. ಹೇಗೆ ಯಜ್ಞದ ಪ್ರಾರಂಭದಲ್ಲಿ ಚಲಿಸುತ್ತಾ ತಿರುಗಾಡುತ್ತಾ ನೋಡುತ್ತಿರುತ್ತಿದ್ದಿರಿ - ಇದು ಧ್ಯಾನದಲ್ಲಿ ಹೋಗಿ ನೋಡುವ ಮಾತಲ್ಲ. ಹೇಗೆ ಆದಿಯಲ್ಲಿ ಸಾಕಾರ ತಂದೆಯೊಬ್ಬರ ಬಗ್ಗೆ ಅನುಭವ ಮಾಡಿದಿರೋ ಹಾಗೆಯೇ ಅಂತ್ಯದಲ್ಲಿ ಈಗ ಎಲ್ಲರ ಸಾಕ್ಷಾತ್ಕಾರ ಆಗುವುದು. ಈ ಸಾಧಾರಣ ರೂಪವು ಮಾಯವಾಗಿಬಿಡುವುದು. ಕೇವಲ ಸೂಕ್ಷ್ಮದೇವತಾ ರೂಪವನ್ನೋ ಅಥವಾ ಪೂಜ್ಯ ರೂಪವನ್ನೋ ನೋಡುವಿರಿ. ಹೇಗೆ ಪ್ರಾರಂಭದಲ್ಲಿ ಅಕಾರೀ ಬ್ರಹ್ಮಾ ಹಾಗೂ ಶ್ರೀಕೃಷ್ಣನ ಸಾಕ್ಷಾತ್ಕಾರವು ಜೊತೆ ಜೊತೆಗೇ ಆಗುತ್ತಿತ್ತೋ ಹಾಗೆಯೇ ಈಗಲೂ ಸಹ ಈ ಸಾಧಾರಣ ರೂಪವನ್ನು ನೋಡುತ್ತಿದ್ದರೂ ಕಂಡುಬರಬಾರದು. ನಿಮ್ಮ ಪೂಜ್ಯ ದೇವೀ ಅಥವಾ ದೇವತಾರೂಪ ಅಥವಾ ಸೂಕ್ಷ್ಮ ದೇವತಾ ರೂಪವನ್ನು ನೋಡುವಂತಾಗಬೇಕು. ಆದರೆ ಇದು ಯಾವಾಗ ಆಗುವುದೆಂದರೆ ನಿಮ್ಮೆಲ್ಲರ ಪುರುಷಾರ್ಥವು ನೋಡುತ್ತಿದ್ದರೂ ನೋಡದಿರುವುದು ಆದಾಗ. ಆಗ ಮಾತ್ರ ಅನೇಕ ಆತ್ಮರಿಗೂ ಶ್ರೇಷ್ಠ ಆತ್ಮರಾದ ನಿಮ್ಮ ಈ ಸಾಧಾರಣ ರೂಪವನ್ನು ನೋಡುತ್ತಿದ್ದರೂ ಸಹ ಅದು ಕಂಡುಬರುವುದಿಲ್ಲ. ಕಣ್ಣುಗಳು ತೆರೆದಿದ್ದಂತೆಯೇ ಒಂದು ಸೆಕೆಂಡ್‌ನಲ್ಲಿ ಸಾಕ್ಷಾತ್ಕಾರ ಆಗುವುದು. ಅಂತಹ ಸ್ಥಿತಿಯನ್ನು ರೂಪಿಸಿಕೊಳ್ಳುವ ಸಲುವಾಗಿ ವಿಶೇಷ ಅಭ್ಯಾಸವನ್ನು ತಿಳಿಸಿಕೊಟ್ಟಿದ್ದೇವೆ. ಇದೇನೆಂದರೆ ನೋಡುತ್ತಿದ್ದರೂ ನೋಡಬಾರದು, ಕೇಳುತ್ತಿದ್ದರೂ ಕೇಳಬಾರದು. ಒಂದೇ ಮಾತನ್ನು ಕೇಳಿರಿ ಹಾಗೂ ಒಂದು ಬಿಂದುವನ್ನೇ ನೋಡಿರಿ, ವಿಸ್ತಾರವನ್ನು ನೋಡದೆ ಸಾರವನ್ನೇ ನೋಡಿರಿ. ವಿಸ್ತಾರವನ್ನು ಕೇಳದೆ ಸದಾ ಸಾರವನ್ನೇ ಕೇಳಿರಿ, ಮಧುಬನವು ಇಂತಹ ಮಂತ್ರಗಾರಿಕೆಯ ನಗರ ಆಗಿಬಿಟ್ಟರೆ ಮಧುಬನದ ಮಹತ್ವ ಎಂದರೆ ಮಧುಬನ ನಿವಾಸಿಗಳ ಮಹತ್ವವನ್ನು ಅರಿತುಕೊಳ್ಳುವರು. ಒಳ್ಳೆಯದು.

ಮಧುಬನದ ಶಕ್ತಿಸೈನ್ಯ ಎಂದರೆ ವಿಶೇಷ ಆತ್ಮರ ಸೈನ್ಯ. ಪ್ರತಿಯೊಬ್ಬರೂ ನಿಮ್ಮ ವಿಶೇಷತೆಯನ್ನು ಚೆನ್ನಾಗಿ ತಿಳಿದುಕೊಂಡಿದ್ದೀರಾ? ವಿಶೇಷತೆಯ ಕಾರಣದಿಂದಲೇ ವಿಶೇಷ ಭೂಮಿಯ ನಿವಾಸಿ ಆಗಿದ್ದೇವೆ. ಎನ್ನುವ ಆನಂದ ಇರುತ್ತದೆಯೇ. ಹಿಂದಿನ ಖಾತೆಯಂತು ಪ್ರತಿಯೊಬ್ಬರದೂ ತಮ್ಮ ತಮ್ಮದು ಇದೆ. ಆ ಖಾತೆಯು ಮುಕ್ತಾಯವಾಗುತ್ತಲೂ ಇರುತ್ತದೆ. ಆದರೆ ಜೊತೆ ಜೊತೆಗೆ ನಾಟಕದನುಸಾರವಾಗಿ ಯಾವುದಾದರೊಂದು ವಿಶೇಷತೆಯೂ ಇದೆ. ಈ ಕಾರಣದಿಂದ ವಿಶೇಷ ಪಾತ್ರವು ದೊರೆತಿದೆ. ಸದಾ ಪುಣ್ಯಭೂಮಿ ಹಾಗೂ ಶ್ರೇಷ್ಠ ಆತ್ಮರ ಸಂಗದ ವಿಶೇಷ ಪಾತ್ರವು ಕಡಿಮೆ ಭಾಗ್ಯವೇನಲ್ಲ. ಜಡಚಿತ್ರಗಳ ಮಂದಿರಗಳ ಪೂಜಾರಿಗಳೂ ಸಹ ತಮ್ಮನ್ನು ಎಷ್ಟು ಶ್ರೇಷ್ಠರೆಂದು ಭಾವಿಸುತ್ತಾರೆ. ಅವರು ಪೂಜಾರಿಯೇ ಆಗಿದ್ದರೂ ಎಷ್ಟು ನಶೆ ಇರುತ್ತದೆ. ಏಕೆಂದರೆ ತಾನು ಮೂರ್ತಿಯ ಸಮೀಪ ಸಂಬಂಧ ಉಳ್ಳವನೆಂದು ತಿಳಿದಿರುತ್ತಾರೆ. ಹೀಗೆ ಜಡಚಿತ್ರದ ಪೂಜಾರಿಯೂ ಸಹ ಎಷ್ಟು ನಲೆಯನ್ನು ಇಟ್ಟು ಕೊಂಡಿರುತ್ತಾನೆ. ಆದರೆ ಇಲ್ಲಿ ಪೂಜಾರಿಯ ಮಾತೇನೂ ಇಲ್ಲ. ಇಲ್ಲಿರುವವರೂ ಸಂಪರ್ಕದಲ್ಲಿ ಇರುವವರೂ, ಸಂಗದಲ್ಲಿ ಇರುವ ಜೊತೆಗಾರರಿಗೆ ಎಷ್ಟು ನಶೆ ಹಾಗೂ ಆನಂದ ಇರಬೇಕು, ಈಶ್ವರೀಯ ಪರಿವಾರದಲ್ಲಿ ಬಂದಿರುವ ಆತ್ಮರಲ್ಲಿ ಯಾವ ವಿಶೇಷತೆಯೂ ಇಲ್ಲ. ಎನ್ನುವುದು ಅಸಂಭವ. ಆದ್ದರಿಂದ ನೀವು ವಿಶೇಷತೆಯನ್ನು ಅರಿತುಕೊಂಡು ಅದನ್ನು ಕರ್ಮದಲ್ಲಿ ಉಪಯೋಗಿಸಿರಿ, ಯಾವುದಾದರೂ ಗುಣ ಅಥವಾ ವಿಶೇಷತೆ ಇದ್ದರೆ ಅದು ಕರ್ಮಣಾ ಸೇವೆಯ ಗುಣ ಆಗಲಿ ಅಥವಾ ಮಧುರತೆಯ ಗುಣ ಆಗಲಿ, ಸ್ನೇಹದ ಗುಣ ಆಗಲಿ ಅದನ್ನು ಕಾರ್ಯದಲ್ಲಿ ಬಳಸಿರಿ. ಹೇಗೆ ಲೋಹವು ಪಾರಸಕ್ಕೆ ಸ್ಪರ್ಶಿಸಿದರೆ ಚಿನ್ನ ಆಗಿಬಿಡುತ್ತದೆಯೋ ಹಾಗೆಯೇ ಒಂದು ಗುಣ ಅಥವಾ ವಿಶೇಷತೆಯು ಸೇವೆಯಲ್ಲಿ ಬಳಸಲ್ಪಡುವುದರಿಂದ ಸೇವೆಯ ಫಲವು ಒಂದಕ್ಕೆ ಲಕ್ಷದಷ್ಟು ದೊರೆಯುವುದರಿಂದ ಆ ಒಂದು ವಿಶೇಷತೆಯು ಅನೇಕ ಸಲ ಫಲವನ್ನು ನೀಡುವುದಕ್ಕೆ ಯೋಗ್ಯ ಆಗಿಬಿಡುತ್ತದೆ. ಹೇಗೆ ಒಂದು ಬೀಜವನ್ನು ಹಾಕಿದರೆ ಎಷ್ಟೊಂದು ಫಲಗಳು ದೊರೆಯುತ್ತವೆಯೋ ಹಾಗೆಯೇ ಒಂದು ವಿಶೇಷತೆಯನ್ನಾದರೂ ಕರ್ಮದಲ್ಲಿ ಉಪಯೋಗಿಸಿರಿ, ಎಂದರೆ ಭೂಮಿಯಲ್ಲಿ ಬೀಜವನ್ನು ಬಿತ್ತಿರಿ. ನೀವು ಎಷ್ಟು ಸೌಭಾಗ್ಯಶಾಲಿ ಆಗಿದ್ದೀರಿ ಎಂಬುದನ್ನು ತಿಳಿದುಕೊಂಡಿರುವಿರಾ? ಬ್ರಾಹ್ಮಣ ಪರಿವಾರದಲ್ಲಿ ಜನ್ಮ ಪಡೆದಿರುವುದರಿಂದ ಜನ್ಮದ ಜೊತೆಯಲ್ಲಿ ಯಾವುದಾದರೊಂದು ವಿಶೇಷತೆಯನ್ನು ತೆಗೆದುಕೊಂಡೇ ಬಂದಿದ್ದೀರಿ. ಅದನ್ನು ಕಾರ್ಯದಲ್ಲಿ ಎಷ್ಟರಮಟ್ಟಿಗೆ ಬಳಸಿಕೊಳ್ಳುತ್ತೀರಿ ಎನ್ನುವುದಷ್ಟೇ ವ್ಯತ್ಯಾಸ ಉಳಿದುಬಿಡುತ್ತದೆ. ಜನ್ಮದ ಭಾಗ್ಯ ಆಗಿರುವುದನ್ನು ಕರ್ಮದಲ್ಲಿ ಅಥವಾ ಸೇವೆಯಲ್ಲಿ ವಿನಿಯೋಗಿಸಿ ಎಂದರೆ ಬೀಜವನ್ನು ಬಿತ್ತುವ ವಿಧಾನವನ್ನು ಕಲಿಯಬೇಕು. ಫಲವಂತು ಅವಶ್ಯವಾಗಿ ದೊರೆಯುತ್ತದೆ. ಬೀಜವನ್ನು ಬಿತ್ತುವುದು ಎಂದರೆ ವಿಶೇಷತೆ ಎನ್ನುವ ಬೀಜವನ್ನು ಸೇವೆಯಲ್ಲಿ ಬಳಸುವುದು. ಇಲ್ಲಿಯಂತೂ ಎಲ್ಲರೂ ಸದಾ ಭಾಗ್ಯದ *ಸಿಂಹಾಸನಾಧಿಕಾರಿಗಳಾಗಿದ್ದೀರಿ* . ಈ ಭಾಗ್ಯದ ಬಗ್ಗೆಯೇ ಕಲ್ಪದ ಹಿಂದಿನ ಜ್ಞಾಪಕಾರ್ಥ ವಾಗಿಯೂ ಇಲ್ಲಿಯವರೆಗೆ "ಒಂದು ಸೆಕೆಂಡಾದರೂ ಸಮೀಪ ಇರುವುದೂ ಕೂಡ ಶ್ರೇಷ್ಠ ಭಾಗ್ಯವೆಂದು" ತಿಳಿಯುತ್ತಾರೆ. ಆದರೆ ಈಗ ಯಾರು ಪ್ರತ್ಯಕ್ಷದಲ್ಲಿ ಸಮೀಪ ಇದ್ದೀರೋ ಅವರ ಆನಂದ ಹಾಗೂ ಭಾಗ್ಯವು ಎಷ್ಟು ಶ್ರೇಷ್ಠವಾದುದು. ಈ ಶ್ರೇಷ್ಠತೆಯನ್ನು ನಿಮ್ಮ ಮುಂದೆ ಇಟ್ಟುಕೊಂಡಿದ್ದರೆ ವ್ಯರ್ಥವಾದುದೆಲ್ಲವೂ ಕೊನೆಯಾಗಿಬಿಡುತ್ತದೆ. ಒಳ್ಳೆಯದು. ಪಾಂಡವರು ಎಂದರೆ ಸದಾ ವಿಜಯಶಾಲಿಗಳು. ಪಾಂಡವರ ಹೆಸರು ವಿಜಯದ ಕಾರಣದಿಂದಲೇ ಪ್ರಸಿದ್ಧವಾಗಿದೆ. ಪಾಂಡವ ಸೈನ್ಯದಲ್ಲಿಯೂ ವಿಶೇಷವಾಗಿ ಸಾಗರ ತೀರದಲ್ಲಿ ಶ್ರೇಷ್ಠ ಸಂಗದಲ್ಲಿ ಇರುವವರು ನೀವು ಆಗಿದ್ದೀರಿ. ಆದ್ದರಿಂದ ಅಂತಹ ಪಾಂಡವ ಸೈನ್ಯದವರು ನೀವು ವಿಜಯಶಾಲಿಗಳಾಗಿದ್ದೀರಾ? ನಿಮ್ಮದು ವಿಜಯದ ಆಟವು ಸದಾ ನಡೆಯುತ್ತದೆಯೋ ಅಥವಾ ಸೋಲು ಗೆಲುವಿನ ಆಟ ಆಡುತ್ತಿರುತ್ತೀರೋ. ಈಗಿನ ಸಮಯ ಹಾಗೂ ಸಹಯೋಗದ ಅನುಗುಣವಾಗಿ ನಾಟಕದ ಅನುಸಾರವಾಗಿ ಏನು ಭಾಗ್ಯವು ಪ್ರಾಪ್ತಿ ಆಗಿದೆಯೋ ಅದಕ್ಕೆ ಅನುರೂಪವಾದ ಆಟವು ನಡೆಯಬೇಕು. ನಾಟಕದ ಅನುಸಾರವಾಗಿ ಏನು ವಿಶೇಷತೆಯು ಪ್ರಾಪ್ತಿ ಆಗಿದೆಯೋ ಅದನ್ನು ಸದಾ ಕಾರ್ಯದಲ್ಲಿ ಬಳಸಿಕೊಳ್ಳಿರಿ. ಆಗ ಅನ್ಯರ ವಿಶೇಷತೆಯೂ ಸಹ ಕಂಡುಬರುವುದು. ವಿಶೇಷತೆಗಳನ್ನು ನೋಡದೆ ಅನ್ಯ ವಿಷಯಗಳನ್ನು ನೋಡುತ್ತೀರಿ, ಆದ್ದರಿಂದ ಪ್ರಭಾವ ಆಗುತ್ತದೆ. ಪ್ರತಿಯೊಬ್ಬರ ವಿಶೇಷತೆಯನ್ನು ಸ್ಮೃತಿಯಲ್ಲಿ ಇಟ್ಟುಕೊಳ್ಳಿರಿ. ಒಬ್ಬರಿಗೊಬ್ಬರಲ್ಲಿ ಭರವಸೆ ಉಳ್ಳವರಾಗಿರಿ. ಆಗ ಅವರ ಮಾತುಗಳ ಭಾವವು ಬದಲಾವಣೆ ಆಗಿಬಿಡುವುದು. ಒಂದು ವೇಳೆ ಇಬ್ಬರು ಪರಸ್ಪರ ಸ್ನೇಹಿತರಾಗಿದ್ದರೆ ಅವರ ಮಧ್ಯೆ ಮೂರನೆಯವರು

ಯಾರಾದರೂ ಇನ್ನೊಬ್ಬರ ನಿಂದೆಯನ್ನು ಮಾಡಲು ಬಂದರೆ ಅವರು ಅವರ ಭಾವವನ್ನು ಬದಲಾವಣೆ ಮಾಡಿಬಿಡುತ್ತಾರೆ. ಹೇಗೆ ಯಾರಾದರೂ ಬ್ರಹ್ಮಾಬಾಬಾರವರ ಬಗ್ಗೆ ಅವರ ನಿಂದೆ ಮಾಡುತ್ತಾರೆ ಎಂದು ನಿಮಗೆ ಹೇಳಿದರೆ ಅದು ನಿಂದೆಯಲ್ಲಿ ಅದು ನಿಂದೆಯಲ್ಲ ಅದು ಸ್ಪಷ್ಟಿಕರಣ ಆಗಿದೆ ಎಂದು ನೀವು ಅವರಿಗೆ ನಿಶ್ಚಯದಿಂದ ಹೇಳುತ್ತೀರಿ. ಎಲ್ಲಿ ನಿಶ್ಚಯ ಇರುತ್ತದೆಯೋ ಅಲ್ಲಿ ಶಬ್ದದ ಭಾವವು ಬದಲಾವಣೆ ಆಗಿ ಸಾದಾರಣ ಶಬ್ದ ಆಗಿಬಿಡುತ್ತದೆ. ಪ್ರತಿಯೊಬ್ಬರ ವಿಶೇಷತೆಯನ್ನು ನೋಡಿದರೆ ಅನೇಕರಿದ್ದರೂ ಒಬ್ಬರೇ ಕಂಡುಬರುವರು. ಏಕಮತವುಳ್ಳ ಸಂಘಟನೆ ಆಗಿಬಿಡುವುದು, ಯಾರಾದರೂ ಯಾರ ಬಗ್ಗೆಯಾದರೂ ನಿಂದೆಯ ಮಾತನ್ನು ಹೇಳಿದರೆ ಅದಕ್ಕೆ ಬೆಂಬಲ ಕೊಡುವುದಕ್ಕೆ ಬದಲಾಗಿ ಹೇಳುವವರ ರೂಪವನ್ನು ಪರಿವರ್ತನೆ ಮಾಡಿಬಿಡಿ. ಅರ್ಥದಲ್ಲಿ ಭಾವನೆಯ ಪರಿವರ್ತನೆ ಮಾಡಿಬಿಡಿ, ಈ ಅಭ್ಯಾಸ ಇರಬೇಕು, ಇಲ್ಲದಿದ್ದರೆ ಒಬ್ಬರ ವಿಷಯದಲ್ಲಿ ಮತ್ತೊಬ್ಬರ ವಿಷಯದಿಂದ ಕೇಳುವುದು, ಅವರ ಬಗ್ಗೆ ಮೂರನೆಯವರಿಂದ ಕೇಳುವುದು ಹೀಗೆ ವ್ಯರ್ಥ ಮಾತುಗಳ ವಾತಾವರಣದಲ್ಲಿ ಹರಡುತ್ತಾ ಇರುತ್ತವೆ. ಈ ಕಾರಣದಿಂದ ಶಕ್ತಿಶಾಲಿ ವಾತಾವರಣವು ರೂಪುಗೊಳ್ಳಲು ಸಾಧ್ಯವಾಗು ವುದಿಲ್ಲ. ಸಾಕ್ಷಾತ್ಕಾರಮೂರ್ತಿಯೂ ಆಗಲಾರಿರಿ. ಆದ್ದರಿಂದ ಸದಾ ಎಲ್ಲರ ಬಗ್ಗೆ ಶುಭಭಾವನೆ ಕಲ್ಯಾಣಭಾವನೆ ಇರಲಿ. ಒಬ್ಬರು ಇನ್ನೊಬ್ಬರ ನಿಂದೆಯನ್ನು ಕೇಳುವುದು. ಸಮಯವನ್ನು ವ್ಯರ್ಥ ಮಾಡಿದಂತೆ ಆಗುತ್ತದೆ. ಸಂಪಾದನೆಯಿಂದ ವಂಚಿತರನ್ನಾಗಿ ಮಾಡುತ್ತದೆ. ಒಂದು ವೇಳೆ ಪರಿವರ್ತನೆ ಮಾಡಲು ಸಾಧ್ಯವಾದರೆ ಕೇಳಿರಿ. ಇಲ್ಲದಿದ್ದರೆ ಕೇಳುತ್ತಿದ್ದರೂ ಕೇಳಬೇಡಿರಿ.

ಪ್ರತಿಯೊಬ್ಬರ ವಿಶೇಷತೆಯ ವರ್ಣನೆಯನ್ನು ಮಾಡಿರಿ. ನಾವು ಇದನ್ನು ನೋಡಿದೆವು ಎಂದು ಯಾರಾದರೂ ಹೇಳಿದರೂ ಸಹ ನಿಮ್ಮ ಬಾಯಿಯಿಂದ ಅಂತಹ ಯಾವ ಮಾತೂ ಬರಬಾರದು. ನೀವು ಅವರ ವಿಶೇಷತೆಯನ್ನು ವರ್ಣನೆ ಮಾಡಿ ಅವರ ಭಾವನೆಯನ್ನು ಪರಿವರ್ತನೆ ಮಾಡಿ ಎಲ್ಲರ ಬಾಯಿಯಿಂದ ಪ್ರತಿಯೊಬ್ಬರ ಬಗ್ಗೆ ಪ್ರಶಂಸೆಯ ಶಬ್ದವೇ ಹೊರಬರಲಿ, ಆಗ ಮಾತ್ರ ತಂದೆಯ ಬಗ್ಗೆ ಪ್ರಶಂಸೆ ನಡೆಯುವುದು. ಇಂತಹ ಸ್ವಾಭಾವಿಕ ಸ್ಥಿತಿ ಇರಬೇಕು. ಶುಭಭಾವನೆಯ ಸ್ವಾಭಾವಿಕ ಸಂಸ್ಕಾರ ಇರಬೇಕು. ಯಾರಲ್ಲಾದರೂ ಏರುಪೇರು ನೋಡಿದರೆ ಅಥವಾ ಕೇಳಿದರೆ ಅದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಡಿರಿ. ಅಲ್ಲಿಗೇ ಕೊನೆಮಾಡಿಬಿಡಿ. ಒಂದುವೇಳೆ ಬುದ್ಧಿಯಲ್ಲಿ ಅದು ಉಳಿದರೆ ಆಗ ಅವರ ಅವಗುಣವೇ ಕಂಡುಬರುತ್ತಿರುವುದು ನಿಮ್ಮನ್ನು ನೀವು ಸದಾ ಖಾಲಿ ಹಾಗೂ ಹಗುರವಾಗಿ ಇಟ್ಟುಕೊಳ್ಳಿರಿ. ಒಂದುವೇಳೆ ಮನಸ್ಸಿನಲ್ಲಿ ಯಾವುದಾದರೂ ಪ್ರಕಾರದ ವಿಚಾರಗಳಿದ್ದರೆ ಅಲ್ಲಿ ತಂದೆಯು ಇರುವುದಿಲ್ಲ.

ಯಾರ ಅವಗುಣವನ್ನೂ ಬೇರೆ ಒಬ್ಬರ ಮುಂದೆ ವರ್ಣನೆ ಮಾಡಬಾರದು, ಏಕೆಂದರೆ ವರ್ಣನೆ ಮಾಡುವುದು ರೋಗದ ಕ್ರಿಮಿಗಳನ್ನು ಹರಡುವಂತಾಗುತ್ತದೆ. ಹೀಗೆ ರೋಗವನ್ನು ಹರಡುವ ಕ್ರಿಮಿಗಳಿದ್ದರೆ ಅದೇ ಸಮಯದಲ್ಲಿಯೇ ಯಾವುದಾದರೂ ಶಕ್ತಿಶಾಲಿ ಔಷಧವನ್ನು ಹಾಕಿ ನಾಶ ಮಾಡಲಾಗುತ್ತದೆ. ಇಂತಹವರ ನಡವಳಿಕೆ ಹೇಗೆ ಇದೆ ಎಂದು ಯಾರಾದರೂ ಕೇಳಿದರೆ ಬಹಳ ಚೆನ್ನಾಗಿದೆ ಎಂದು ಮನಃ ಪೂರ್ವಕವಾಗಿ ಹೇಳಬೇಕು. ಅನೇಕ ಆತ್ಮರು ಅನೇಕ ಭಾವನೆಗಳಿಂದ ನಿಮ್ಮ ಬಳಿ ಬರುತ್ತಾರೆ. ಆದರೆ ನಿಮ್ಮ ಕಡೆಯಿಂದ ಶುಭ ಭಾವನೆಯ ಮಾತುಗಳನ್ನೇ ತೆಗೆದುಕೊಂಡು ಹೋಗಲಿ. ಭಾವನೆಯು ಶುಭ ಆಗಿರಲಿ. ಒಂದು ಭಾವನೆ, ಒಂದು ಇಚ್ಛೆ, ಒಬ್ಬರ ಸಂಬಂಧದಲ್ಲಿ ನಿರ್ವಿಘ್ನ ಆಗಿ ವ್ಯರ್ಥ ವಿಚಾರಗಳ ಸಂಗ್ರಹವನ್ನು ನಾಶಮಾಡಿರಿ. ಹಾಗೂ ಆನಂದದ ವಿಚಾರಗಳ ಸಂಗ್ರಹ ಮಾಡಿಕೊಳ್ಳಿರಿ. ಆನಂದದಲ್ಲಿ ತೇಲಾಡುವ ಆತ್ಮರಾಗಿ ಎಲ್ಲರಿಗೂ ಕಂಡುಬರಬೇಕು. ಪ್ರತಿಯೊಂದು ಮಾತಿನಲ್ಲಿಯೂ ಆತ್ಮೀಯತೆ ಇರಲಿ, ಆತ್ಮೀಯತೆಯ ಶಬ್ದಗಳು ತುಂಬಾ ಮಧುರ ಆಗಿರುತ್ತವೆ. ಸಮಯದ ಅನುಗುಣವಾಗಿ ಸ್ಥಿತಿಯೂ ಸಹ ಉನ್ನತ ಆಗಬೇಕು. ವೃದ್ಧಿ ಕಲೆಯ ಅರ್ಥವೇನೆಂದರೆ ಮುಂಚೆ ಏನಿತ್ತೋ ದಾಟಿ ಮುಂದೆ ಹೋಗುವುದು. ಅಂತಹ ಸ್ಥಿತಿ ಆಗಬೇಕು. ಸಾಕ್ಷಾತ್ಕಾರ ಮೂರ್ತಿ ಆಗಿ ಕಂಡುಬರಬೇಕು. ಆಗ ಎಷ್ಟು ಜನಸಂದಣಿಯು ಸೇರುತ್ತದೆ ಎಂಬುದನ್ನು ನೋಡಿರಿ. ಈಗ ಎಲ್ಲರ ಪೊಳ್ಳುತನವು ಬಯಲಾಗುವುದು ಹಾಗೂ ನಿಮ್ಮ ವಿಶೇಷತೆಯು ಪ್ರಸಿದ್ಧ ಆಗುವುದು, ಆದರೆ ಅದರ ಆಧಾರವು ನಿಮ್ಮ ಅವಸ್ಥೆಯನ್ನು ಅವಲಂಭಿಸಿದೆ. ಅನೇಕ ಪ್ರಕಾರದ ಜನಗಳು ನಿಮ್ಮನ್ನು ಪ್ರಶ್ನೆಮಾಡಲು ಬರುವರು. ಅವರು ನಿಮ್ಮ ಕಾರ್ಯವನ್ನು ಹಾಳು ಮಾಡಲು ಪ್ರಯತ್ನಿಸಬಹುದು, ಆದರೆ ನೀವು ಕೆಟ್ಟುಹೋಗಿರುವವರನ್ನು ಶ್ರೇಷ್ಠರನ್ನಾಗಿ ಮಾಡಿದರೆ ಎಷ್ಟೊಂದು ಜನರಲ್ಲಿ ಪ್ರಚಾರ ಆಗುತ್ತದೆ ಎಂಬುದನ್ನು ನೋಡಬಹುದು. ನಿಮ್ಮ

ಸ್ಥಿತಿಯು ಸದಾ ಏಕಾಗ್ರ ಆಗಿರಬೇಕು. ಆಗ ನಿಮ್ಮ ಹೆಸರು ಪ್ರಸಿದ್ಧಿ ಆಗುವುದು. ನಿಮ್ಮ ವೃತ್ತಿ, ದೃಷ್ಟಿ, ಸ್ವಭಾವದ ಪರೀಕ್ಷೆ ಮಾಡುವವರೆಲ್ಲರೂ ಬರುವರು. ಆದರೆ ಅವರಿಗೆ ನಿಜವಾದ ಜ್ಞಾನದ ಪರಿಚಯ ಆಗಿಬಿಡಬೇಕು. ಒಳ್ಳೆಯದು.

ಅವ್ಯಕ್ತ ಮುರಳಿ 10-12-1978.

***ವಿಸ್ತಾರವನ್ನು ನೋಡದೆ ಸಾರ ಅರ್ಥಾತ್ ಬಿಂದುವನ್ನು ನೋಡಿರಿ.***

ಮಧುವನ ನಿವಾಸಿಯರು ಸದಾ ಮಧುರತೆ ಎಂಬ ಸಾಗರದಲ್ಲಿ ತೇಲಾಡುವವರು, ಮಧುಬನ ನಿವಾಸಿಗಳ ಪ್ರತಿಯೊಂದು ಸಂಕಲ್ಪ ನಾಲ್ಕೂ ಕಡೆ ಹರಡುತ್ತದೆ. ನಾವು "ದಾತನ ಮಕ್ಕಳಾಗಿ ಸರ್ವಾತ್ಮರಿಗೆ ಕೊಡಬೇಕು ಆದರೆ ತೆಗೆದುಕೊಳ್ಳಬಾರದು" ಎಂಬ ಲಕ್ಷ್ಯ ಇರುವವರೇ ತೃಪ್ತ ಆತ್ಮರು ಮತ್ತು ಸಂಪನ್ನ ಮೂರ್ತಿಗಳು. "ವಿಸ್ತಾರವನ್ನು ನೋಡುತ್ತಲೂ ನೋಡದೆ, ಹೇಳುತ್ತಲೂ ಕೇಳಬಾರದು"- ಈ ಅಭ್ಯಾಸ ಬಹಳ ಕಾಲ ಇದ್ದಾಗಲೇ ಅಂತಿಮದಲ್ಲಿ ಬರುವ ವಿಕರಾಳ ದೃಶ್ಯಗಳನ್ನು ನೋಡಿ ಪಾಸ್ ಆಗಬಲ್ಲಿರಿ. ಎಂತಹ ಸಾಧಾರಣ ಕರ್ಮ ಮಾಡುತ್ತಿರುವಾಗಲೂ ಸಾಕ್ಷಾತ್ಕಾರ ಮೂರ್ತಿಯಾಗಿ ಕಾಣಿಸಬೇಕು. ಕರ್ಮ ಮತ್ತು ಮನಸ್ಸಿನ ಸಮತೋಲನ ಇರಬೇಕು. ಸ್ಥೂಲ ಕಾರ್ಯವನ್ನು ಮಾಡುತ್ತಿರುವಾಗಲೂ ಅರ್ಥಾತ್ ಬಟ್ಟೆಯನ್ನು ಒಗೆಯುತ್ತಿರುವಾಗಲೂ, ಕಸಗೂಡಿಸುತ್ತಿರುವಾಗಲೂ, ಸ್ಥಿತಿ ಮಹಾನ್ ಆಗಿ ಇರಬೇಕು, ಎಂದು ಹೇಳುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನನ್ನ ವೃತ್ತಿಯಲ್ಲಿ, ಮಾತಿನಲ್ಲಿ, ಕರ್ಮದಲ್ಲಿ ಮಧುರತೆ ಇರುವ ಮಧುಬನ ನಿವಾಸಿ.

2. ನಾನು ವರ್ತಮಾನ ಮತ್ತು ಭವಿಷ್ಯದಲ್ಲಿಯೂ ಸ್ವರ್ಗದಲ್ಲಿ ಇರುವ ಡಬಲ್ ಸ್ವರ್ಗಕ್ಕೆ ಅಧಿಕಾರಿ.

3. ನನ್ನ ಸ್ವರ್ಗದ ಭಂಡಾರ ಸಂಪನ್ನವಾಗಿ, ಸದಾ ತೃಪ್ತ ಆತ್ಮ ಎಂಬ ಅನುಭವದಲ್ಲಿ, ಸಂಪನ್ನ ಸ್ಥಿತಿಯಲ್ಲಿ, ಇಚ್ಛಾ ಮಾತ್ರಂ ಅವಿದ್ಯಾ ಸ್ಥಿತಿಯಲ್ಲಿ ಸಂಪನ್ನವಾಗಿ, ಈ ಎಲ್ಲಾ ವಿಷಯಗಳಲ್ಲಿ ಸ್ವತಃ ಸಂಸ್ಕಾರ ಸ್ವರೂಪವಾಗಿರುವ ಡಬಲ್ ಸ್ವರ್ಗ ನಿವಾಸಿ

4. ನಾನು ಸದಾ ಅಚಲವಾಗಿ ಇರುತ್ತಾ ಅಚಲವಾದ ವಾಯುಮಂಡಲವನ್ನು ತಯಾರು ಮಾಡಿರುವ ಮಧುಬನ ನಿವಾಸಿ.

5. ನನ್ನ ಸತ್ಯವಾದ ಮನಸ್ಸು, ಉತ್ಸಾಹದಿಂದ, ತಂದೆಯ ಸ್ನೇಹದಲ್ಲಿ ತಿಳಿಸಿರುವ ಅನುಭವದಿಂದ ಸರ್ವಾತ್ಮರು ಪರಿವರ್ತನೆಯಾಗಿ ಹೈಜಂಪ್ ಮಾಡಿದ್ದಾರೆ.

6. ನಾನು ಕರ್ಮದಿಂದ ಕರ್ಮಣಾ ಸೇವೆಯೊಂದಿಗೆ ಮನಸ್ಸಿನಿಂದ ಮನಸಾ ಸೇವೆ ಅರ್ಥಾತ್ ಸಂಕಲ್ಪದಿಂದ ಸುವಾಸನೆಯ (ಸತೋಪ್ರಧಾನ) ತರಂಗಗಳನ್ನು ವಿಶ್ವವೆಲ್ಲಾ ವ್ಯಾಪಿಸಿರುವ ಮಧುಬನ ನಿವಾಸಿ.

7. "ನಾನು ದಾತಾನ ಮಗುವಾಗಿ ಸರ್ವ ಆತ್ಮರಿಗೆ ಕೊಡಬೇಕು ಆದರೆ ತೆಗೆದುಕೊಳ್ಳಬಾರದು" ಎಂಬ ಲಕ್ಷ್ಯಧಾರಿ.

8. ನಾನು ಕರ್ಮದಲ್ಲಿ ಫುಲ್ ಸ್ಟಾಪ್ ಅರ್ಥಾತ್ ಬಿಂದು ಸ್ಮೃತಿಯಲ್ಲಿ, ಬಿಂದು ಅರ್ಥಾತ್ ಬೀಜರೂಪ ಸ್ಥಿತಿಯಲ್ಲಿ ಇರುತ್ತಾ, ವಿಸ್ತಾರವನ್ನು ನೋಡುತ್ತಲೂ ನೋಡದೆ, ಸಾರದಲ್ಲಿ ಪರಿವರ್ತನೆ ಮಾಡಿಕೊಂಡಿರುವ ಅಭ್ಯಾಸದಿಂದ ಅಂತಿಮದಲ್ಲಿ ಪಾಸ್ ಅಂಕಗಳನ್ನು ಪಡೆದಿದ್ದೇನೆ.

9. ನಾನು ಕರ್ಮ ಮಾಡುತ್ತಲೂ ಮನಸಾ ಶಕ್ತಿಯಿಂದ ವಾಯುಮಂಡಲವನ್ನು ಶಕ್ತಿಶಾಲಿಯಾಗಿ, ಸ್ನೇಹ ಸಂಪನ್ನವಾಗಿ, ಸರ್ವ ಆತ್ಮರಿಗೆ ಸಹಯೋಗವನ್ನು ಕೊಟ್ಟು ತರಂಗಗಳನ್ನು ವ್ಯಾಪಿಸಿ ಸಕಾರ ಶರೀರವನ್ನು ಆಕಾರಿ ಪರಿಶ್ತಾ ರೂಪವಾಗಿ ಅನುಭವ ಮಾಡಿಸಿರುವ ಸಾಕ್ಷಾತ್ಕಾರ ಮೂರ್ತಿ.

10. ನಾನು ಸಾಧಾರಣ ಕರ್ಮ ಮಾಡುತ್ತಲೂ ಸ್ಥಿತಿಯನ್ನು ಶ್ರೇಷ್ಠವಾಗಿ ಇಟ್ಟುಕೊಳ್ಳುವ ಮಹಾನ್ ಆತ್ಮ.

11. ನಾನು ಕೇಳುತ್ತಲೂ ಕೇಳದೆ, ನೋಡುತ್ತಲೂ ನೋಡದೆ, ಒಂದೇ ಬಿಂದುವನ್ನು ನೋಡುತ್ತಾ, ಒಂದೇ ವಿಷಯವನ್ನು ಕೇಳುತ್ತಾ, ವಿಸ್ತಾರವನ್ನು ಸಾರದಲ್ಲಿ ಪರಿವರ್ತನೆ ಮಾಡಿಕೊಂಡು ಒಂದು ಕ್ಷಣದಲ್ಲಿ ಸಾಕ್ಷಾತ್ಕಾರ ಮಾಡಿಸಿರುವ ಪೂಜ್ಯದೇವಿ ದೇವತಾ ಸ್ವರೂಪ.

12. ನಾನು ಸದಾ ತಂದೆಯ ಸಂಸ್ಕಾರಗಳೊಂದಿಗೆ, ಸಂಗದೊಂದಿಗೆ ಇರುವ, ನಶೆ ಮತ್ತು ಆನಂದದಲ್ಲಿರುವ ವಿಶೇಷ ಆತ್ಮ.

13. ನಾನು ನನ್ನ ವಿಶೇಷತೆ ಎಂಬ ಬೀಜವನ್ನು ಸೇವೆಯಲ್ಲಿ ಉಪಯೋಗಿಸುವುದರಿಂದ ಒಂದಕ್ಕೆ ಲಕ್ಷಪಟ್ಟು, ಅನೇಕ ಸಮಯಗಳಲ್ಲಿ ಫಲವನ್ನು ಪಡೆದಿದ್ದೇನೆ.

14. ನಾನು ನನ್ನ ಶ್ರೇಷ್ಠತೆಯನ್ನು ಎದುರಿಗಿಟ್ಟುಕೊಳ್ಳುವುದರಿಂದ ವ್ಯರ್ಥ ವಿಷಯಗಳನ್ನು ಸಮಾಪ್ತಿ ಮಾಡಿರುವ ಸಮರ್ಥ ಸ್ವರೂಪ.